ಶ್ರೀ ಎಚ್. ಕೆ. ವೀರಣ್ಣಗೌಡ.—ವರದಿಯನ್ನು ಕಳುಹಿಸಿದ್ದಾರೆ. ಅದು ಇನ್ನೂ ಎರಡು ವರ್ಷಗಳ ಕಾಲವಾದರೂ ಆಗಬಹುದು. ಏಕೆಂದರೆ ಅಲ್ಲಿ ನೀರು ಸಿಕ್ಕುತ್ತದೆ ಎಂದು ಪರೀಕ್ಷೆಯಾದನೆಂತರ ತಾವು ಹೇಳಿದಹಾಗೆ ಅಣೆಕಟ್ಟನ್ನು ಕಟ್ಟಲು ಪ್ರಯತ್ನ ಪಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ತಮ್ಮ ಇಲಾಖೆಯಲ್ಲಿ ಲೆಬ್ಬಪತ್ರಗಳನ್ನು ಇಟ್ಟಿದ್ದೀರಿ. ಅವುಗಳನ್ನೆಲ್ಲಾ ಪರಿಶೀಲನೆಮಾಡಿ ಏತಕ್ಕೋಸ್ಕರ ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳುವಾರದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪುಸ್ತಕಗಳಲ್ಲಿ ಲೆಖ್ಖವಿರಬಹುದು. ಆದರೆ ಕಾರ್ಯತಃ ನೆರವೇರಿಸಬೇಕಾದರೆ ಸುಮಾರು 2-2½ ವರ್ಷಗಳವರೆಗೂ ಆ ವಿಚಾರಗಳನ್ನೆಲ್ಲಾ ಅಜಮಾಯಿಷಿಮಾಡಿ ಮುಂದೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

Estimates for the repair of the Byrasagar Tank in Gudibanda Taluk.

Q.—100. **Sri A. MUNIYAPPA** (Chickaballapur—Scheduled Castes).—

Will the Government be pleased to state :—

(*a*) the cost of the estimate prepared in regard to repairs to the Byrasagar tank in Gudibanda taluk;

(*b*) the difficulties in taking up the above work ?

A.—**Sri H. K. VEERANNA GOWDH** (Minister for Public Works).—

(*a*) Rs. 2,28,500.

(*b*) No difficulty is anticipated. Provision has been made for the work in this year's budget and work is expected to be taken up soon.

ಶ್ರೀ ಎ. ಮುನಿಯಪ್ಪ.—ಈ ಎಸ್ಟಿಮೇಟ್ ಮಂಜೂರಾಗಿ ಎಷ್ಟು ದಿವಸಗಳಾದವು ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಎಸ್ಟಿಮೇಟ್ ಮಂಜೂರಾದುದು 1956ನೇ ಸೆಪ್ಟೆಂಬರ್ ತಿಂಗಳಲ್ಲಿ.

ಶ್ರೀ ಎ. ಮುನಿಯಪ್ಪ.—ಇಷ್ಟು ದಿವಸಗಳು ನಿಧಾನವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕಾಗಲೆ ಸರ್ಕಾರದವರು 1957-58ನೇ ಸಾಲನಲ್ಲಿ ಈ ಕೆರೆಯ ದುರಸ್ತಿ ಕಾಮಗಾರಿಯನ್ನು ಪ್ರಾರಂಭ ಮಾಡ ಬೇಕೆಂದು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಅದರಂತೆ ಆ ಸಾಲನಲ್ಲಿಯೇ ಪ್ರಯತ್ನಮಾಡಬೇಕು. ಅದಕ್ಕಾಗಿ ಹಣ ಒದಗಿಸಬೇಕು. ಈ ವರ್ಷದ ಪ್ರಾರಂಭದಲ್ಲಿ ಅದನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಎ. ಮುನಿಯಪ್ಪ.—ಇದನ್ನು ಹೋದ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿತ್ತೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ. ಈ ವರ್ಷ ದಲ್ಲಿ ಸೇರಿಸಬೇಕೆಂದು ಸ್ಪೆಸಿಫಿಕ್ ಆಗಿ ಒಂದು ಸರ್ಕಾರದ ಆರ್ಡರ್ ಆಗಿದೆ.

ಶ್ರೀ ಎ. ಮುನಿಯಪ್ಪ.—ಬಡ್ಜೆಟ್ಟಿನಲ್ಲಿ ಸೇರಿಸಿರುವ ಕೆಲಸಗಳು ಎಷ್ಟೋ ಇವೆ. ಬಡ್ಜೆಟ್ಟಿನಲ್ಲಿ ಸೇರಿಸಿರುವ ದರಿಂದ ಈ ವರ್ಷ ಕೆರೆಯ ದುರಸ್ತಿ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ ?

Sri H. K. VEERANNA GOWDH.—I do not know whether this supplementary is relevant to this particular question.

Mr. SPEAKER.—He wants to know whether it is provided for in the Budget or not and if it is provided for what is the difficulty in undertaking it.

Sri H. K. VEERANNA GOWDH.—There is no difficulty in undertaking it. I have already answered that it would be taken up this year, because money has been provided for it in this year's Budget.

ಶ್ರೀ ಎ. ಮುನಿಯಪ್ಪ.—ಈ ವರ್ಷದ ಆಯವ್ಯಯ ದಲ್ಲಿ ಎಷ್ಟು ಸಾವಿರ ರೂಪಾಯಿಗಳನ್ನು ಈ ಕಾಮ ಗಾರಿಗೋಸ್ಕರ ಮಂಜೂರು ಮಾಡಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಐವತ್ತೈದು ಸಾವಿರ ರೂಪಾಯಿಗಳನ್ನು ಮಂಜೂರುಮಾಡಿದೆ. ಈ ವರ್ಷದಲ್ಲಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Construction of Jakkalu Modagu Reservoir.

Q.—158. **Sri S. MUNI RAJU** (Chickballapur).—

Will the Government be pleased to state :—

(*a*) the date of commencement of the construction of Jakkalu Modagu Reservoir (Jalasaya) in Chickballapur taluk;

(*b*) the progress of work so far made and the costs incurred so far (data may be furnished in percentage as well as in terms of money);

(*c*) the amount of loss incurred each year since the commencement of the above work on account of the same being washed away due to rainfall;

(*d*) the amount spent on the staff and officers engaged in that work from the date of commencement of work up to 31st March 1957 ?

A.—**Sri H. K. VEERANNA GOWDH** (Minister for Public Works).—

(*a*) July 1954.

(*b*) The total cost incurred to the end of March 1957 is Rs. 3,10,564.

(SRI H. K. VEERANNA GOWDH.)

About 30 per cent of the work is completed.

			Rs.
(*c*)	1954-55	...	Nil
	1955-56	...	Nil
	1956-57	...	100

(*d*) Rs. 17,613 on officers and office staff; and Rs. 16,706 on temporary establishment.

ಶ್ರೀ ಎಸ್. ಮುನಿರಾಜು.—ನನ್ನ (*a*) ಪ್ರಶ್ನೆಗೆ ಉತ್ತರವಾಗಿ ಜುಲೈ 1954ರಲ್ಲಿ ಜಲಾಶಯ ಕಟ್ಟಿಸುವ ಕಾರ್ಯ ಪ್ರಾರಂಭಿಸಲಾಯಿತು ಎಂದು ಅಪ್ಪಣೆ ಕೊಡಿಸಿದ್ದೀರಿ. ಈಗ ಎಷ್ಟು ದಿವಸದೊಳಗೆ ಈ ಕೆಲಸವನ್ನು ಮುಗಿಸಬೇಕೆಂದು ತಾವು ನಿರ್ಧರಿಸಲಾಗಿದೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಇಷ್ಟು ದಿವಸಗಳೊಳಗೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಸುಮಾರು ಶೇಕಡ 30 ರಷ್ಟು ಕೆಲಸ ಮುಗಿದಿರುತ್ತದೆ. ಎಲ್ಲಾ ಐಟಂಗಳೂ ಸರಿಹೋಗಬೇಕಾಗಿದೆ. ಅಲ್ಲಿ ಹೆಚ್ಚಿಗೆ ಕೂಲಿಗಾರರು ಸಿಕ್ಕುವುದು ಕಷ್ಟವಾಗುತ್ತದೆ. ಅಲ್ಲಿ ಹೋಗಿ ಕೆಲಸಮಾಡುವ ಸರ್ಕಾರಿ ನೌಕರರಿಗೆ ಸರಿಯಾದ ಅನುಕೂಲದ ವ್ಯವಸ್ಥೆ ಮತ್ತು ಸಿಬ್ಬಂದಿಗೆ ಕ್ವಾರ್ಟರುಗಳು ಇಲ್ಲ. ಈಗ ಮುಕ್ಕಾಲು ಭಾಗದಷ್ಟು ತೊಂದರೆಗಳು ಸ್ವಲ್ಪ ಪರಿಹಾರವಾಗಿ ತೀವ್ರವಾದ ಕಾರ್ಯ ಪ್ರಾರಂಭವಾಗಿದೆ. ಆದಷ್ಟು ಬೇಗ ಕೆಲಸವನ್ನು ಮುಗಿಸಲಾಗುತ್ತದೆ.

ಶ್ರೀ ಎಸ್. ಮುನಿರಾಜು.—ಎಷ್ಟು ದಿವಸಗಳೊಳಗೆ ಕೆಲಸ ಮುಗಿಸಬೇಕೆಂದು ತಾವು ನಿಗದಿ ಮಾಡಿದ್ದೀರಿ?

ಅಧ್ಯಕ್ಷರು.—(ಸದಸ್ಯರನ್ನು ಕುರಿತು) ಅವರು ಅದಕ್ಕೆ ಆಗಲೇ ಉತ್ತರ ಹೇಳಿದ್ದಾರಲ್ಲ. (ಸಚಿವರನ್ನು ಕುರಿತು) ಆದಷ್ಟು ಜಾಗ್ರತೆ ಕೆಲಸ ಮುಗಿಸುತ್ತೇವೆ ಎಂದು ಹೇಳಿದರೆ, ಸದಸ್ಯರಿಗೆ ಸಾಲದು; ಎಂದಿಗೆ ಕೆಲಸ ಮುಕ್ತಾಯವಾಗುತ್ತದೆ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇಷ್ಟು ದಿವಸಗಳೊಳಗೇ ಈ ಕಾಮಗಾರಿಯನ್ನು ಮುಗಿಸಬೇಕೆಂದು ಏನೂ ತೀರ್ಮಾನವಾಗಿಲ್ಲ. ಈ ಮಧ್ಯೆ ಕೆಲವು ಅನಿವಾರ್ಯವಾದ ತೊಂದರೆಗಳು ಬಂದು ಕೆಲಸ ಸ್ವಲ್ಪ ನಿಧಾನವಾಗಿ ಈಗ ಅವೆಲ್ಲವೂ ಪರಿಹಾರವಾಗುತ್ತಿವೆ. ಕೆಲಸ ಬೇಗ ಮುಗಿಯಬಹುದು.

AN HON'BLE MEMBER.—Supplementary to (*c*). It has been mentioned in the reply that work worth about Rs. 100 was washed away. May I know whether any precautionary measures were taken to prevent the washing away of the work already done as a result of heavy rain?

ಶ್ರೀ ಎಚ್. ಕೆ. ವೀರಣ್ಣಗೌಡ.—ತಮಗೆ ಗೊತ್ತಿರುವ ಹಾಗೆ, ಅನಿರೀಕ್ಷಿತವಾಗಿ ಹೆಚ್ಚು ಮಳೆ ಬಂದು ಸುಮಾರು 100 ರೂಪಾಯಿಗಳಷ್ಟು ಸಾಮಾನು ನರಂಜಾಮು ಕೊಚ್ಚಿಹೋಗಿದೆ. ಪ್ರಿಕಾಷನರಿ ಮೆಜರ್ಸ್ ತೆಗೆದುಕೊಂಡಿದ್ದಾರೋ ಇಲ್ಲವೋ ಎಂಬುದನ್ನು ನಾನು ಕೇಳಿ ಹೇಳಬೇಕಾಗಿದೆ.

Sri J. H. SHAMSUDDIN.—What is the percentage of the expenditure so far incurred as against the total estimated cost?

Sri H. K. VEERANNA GOWDH.—About one-third of the total estimated expenditure has been spent.

Sri A. V. NARASIMHA REDDY.—What is the estimated cost of the project?

Sri H. K. VEERANNA GOWDH.—About Rs. 9,50,000.

Sri N. RACHIAH.—Sir, the Parliamentary convention is that the Hon'ble Member and the Hon'ble Minister concerned should address the Chair and they should not address each other in the House.

Mr. SPEAKER.—Of course, that is the Parliamentary convention and I think that is being followed here also. I did not find that there was any breach of it here. If the Hon'ble Member means to say that the Hon'ble Minister while replying, is facing the member who put the supplementary, it does not matter.

Sri G. SIVAPPA.—May I know whether Government have not appointed a separate Sub-Division for execution of this work?

Sri H. K. VEERANNA GOWDH.—A special Sub-Division has been created.

Sri G. SIVAPPA.—Is it not a fact that this special Sub-Division was appointed only since 1954-55?

Sri H. K. VEERANNA GOWDH.—Formerly, it was attached to the regular Sub-Division of Chickaballapur Taluk. Since they could not tackle the work efficiently, a separate Sub-Division was established for this purpose.

12-30 P.M.

Sri G. SIVAPPA.—Am I to understand that one Sub-Division is doing both the works?

Sri H. K. VEERANNA GOWDH.—There is a separate division for regular work in the taluk and there is a special sub-division for this particular project.

Sri G. SIVAPPA.—Is it a fact that due to delayed execution the percentage of supervisory work has increased?

Mr. SPEAKER.—That is a matter of opinion.

ಶ್ರೀ ಎ. ಆರ್. ಬದರಿನಾರಾಯಣ.—ಈ ಜಲಾಶಯವನ್ನು ಕಟ್ಟಿಸುವ ಕೆಲಸವನ್ನು 1954ರಲ್ಲಿ ಪ್ರಾರಂಭಿಸಲಾಯಿತು ಮತ್ತು ಈವರೆಗೆ ಸುಮಾರು ಶೇಕಡ 30ರಷ್ಟು ಕೆಲಸ ಮುಗಿದಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಎಚ್. ಕೆ. ವೀರಣ್ಣಗೌಡ —ಉತ್ತರ ಕೊಟ್ಟಿದೆ, ಸ್ವಾಮಿ.

ಶ್ರೀ ಎ. ಆರ್. ಬದರಿನಾರಾಯಣ.—ಇಂಥ ಕೆಲಸಗಳು ಬಹಳ ನಿಧಾನವಾಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಸಾಮಾನ್ಯವಾದ ಪ್ರಶ್ನೆಯನ್ನು ಕೇಳುತ್ತಿರುವಿರಿ, ಹಾಗೆ ಕೇಳದೆ ಇಂಥ ಒಂದು ಕೆಲಸದಲ್ಲಿ ನಿಧಾನವಾಗಿದೆಯೇ ಎಂದು ಕೇಳಬಹುದು.

ಶ್ರೀ ಎ. ಆರ್. ಬದರಿನಾರಾಯಣ.—ಇದೇ ಕ್ರಮದಲ್ಲಿ ಇನ್ನು ಮುಂದೆಯೂ ಈ ಜಲಾಶಯದ ಕೆಲಸ ನಡೆದರೆ ಬಹಳ ನಿಧಾನವಾಗಿ ಆಗುವದಿಲ್ಲವೆ ?

Mr. SPEAKER.—That is a matter of opinion.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಜಲಾಶಯದ ಕೆಲಸ ಪ್ರಾರಂಭವಾದಂದಿನಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಬಗ್ಗೆ ಒಟ್ಟು 34,319 ರೂಪಾಯಿ ಖರ್ಚು ಆಗಿದೆ. ಇದನ್ನು ವಜಾಮಾಡಿದರೆ ಉಳಿದ ಹಣ 2,76,245 ಖರ್ಚು ಆಗಿದೆ. ಇಷ್ಟು ವರ್ಷಗಳಲ್ಲಿ ಸಿಬ್ಬಂದಿಗಾಗಿಯೇ 34,319 ರೂಪಾಯಿ ಖರ್ಚು ಮಾಡಿದ್ದರೂ ಕೆಲಸವನ್ನು ಮುಗಿಸಲು ಆಗಲಿಲ್ಲವೇ ?

Mr. SPEAKER.—That question is irrelevant.

Constitution of a Committee to recommend grant of land to political sufferers.

Q.—221. Sri K. KENCHAPPA (Hiriyur).—

Will the Government be pleased to state :—

(*a*) the names of the committee members with their addresses appointed for each district in the State for recommending the names and addresses of the political sufferers, for grant of lands, etc. ;

(*b*) the number of them who were Congressmen and non-Congressmen at the time they were appointed ;

(*c*) whether they are aware that the Committee recommended the names of many persons who were not political sufferers ;

(*d*) whether they have directed to grant lands to political sufferers who are owning lands ?

A.—Sri M. P. PATIL (Minister for Revenue).—

(*a*) No such committee has been constituted.

The Government has decided to revise the list of political sufferers.

(*b*) Does not arise in view of reply to clause (*a*).

(*c*) Do do

(*d*) Do do

ಶ್ರೀ ಕೆ. ಕೆಂಚಪ್ಪ.—" The Government has decided to revise the list of political sufferers " ಎಂದು ಇದೆ. ಈ ರೀತಿಯಾಗಿ ಈ ಮೊದಲೇ ತಯಾರುಮಾಡಲಾಗಿದ್ದ ಪಟ್ಟಿಯನ್ನು ದುರಸ್ತು ಮಾಡಬೇಕೆಂದು ಇದ್ದರೆ, ಈ ಮೊದಲಿನ ಆ ಪಟ್ಟಿಯನ್ನು ಯಾವ ಆಧಾರದ ಮೇಲೆ ಮಾಡಿರುತ್ತೀರಿ ?

ಶ್ರೀ ಟಿ. ಮರಿಯಪ್ಪ.—ಲ್ಯಾಂಡ್ ರೆವೆನ್ಯೂ ರೂಲ್ಸ್ ಗಳಿಗೆ ಅನುಗುಣವಾಗಿ ಯಾರು ಯಾರು ರಾಜಕೀಯ ಸಂತ್ರಸ್ತರು ಎಂದು ಸರಕಾರದ ಗಮನಕ್ಕೆ ಬಂದಿದೆಯೋ ಅಂಥವರ ಹೆಸರುಗಳು ಇರತಕ್ಕಂಥ ಪಟ್ಟಿಯನ್ನು ತಯಾರು ಮಾಡಿದೆ.

ಶ್ರೀ ಕೆ. ಕೆಂಚಪ್ಪ.—ಈ ಮೂಲ ಪಟ್ಟಿಯನ್ನು ತಯಾರು ಮಾಡುವಾಗ ಅನುಸರಿಸಿದ ಮಾರ್ಗಗಳು ಯಾವಯಾವುಗಳೆಂಬುದನ್ನು ಹೇಳುವಿರಾ ?

ಶ್ರೀ ಟಿ. ಮರಿಯಪ್ಪ.—ಮಾಹಿತಿಯನ್ನು ದೊರಕಿಸಿಕೊಳ್ಳಲು ಸರಕಾರಕ್ಕೆ ಯಾವಯಾವ ಮಾರ್ಗಗಳಿವೆಯೋ ಅಂಥ ಎಲ್ಲ ಮಾರ್ಗಗಳನ್ನೂ ಉಪಯೋಗಿಸಿಕೊಂಡು ಮಾಹಿತಿಯನ್ನು ಸಂಪಾದಿಸಲಾಗಿದೆ.

AN HON'BLE MEMBER.—When was the list prepared ?

Sri T. MARIAPPA.—This list has been published in the Gazette.

AN HON'BLE MEMBER.—I want to know when the list was prepared.

Sri T. MARIAPPA.—It has been published in the Gazette dated 26th October 1956.

AN HON'BLE MEMBER.—What is the total number of political sufferers in that list ?

Sri T. MARIAPPA.—Is it open to an Hon'ble Member to put a question on a matter the information about which is printed in the Gazette ?

Mr. SPEAKER.—It has been published in the Gazette and it is an open secret now.

Sri D. DEVARAJ URS.—It was just now stated that the list of political sufferers has been prepared in accordance with the rule laid down in the Land Revenue Rules, but the answer given here is that Government has decided to revise the list of political sufferers. What exactly is meant by 'revision of list of political sufferers' ?